ಅವನು ತಮಾಷೆ ಮಾಡುತ್ತಿದ್ದಾನೆಂದು ಎಂಥ ಮೂರ್ಖನಿಗೂ ಗೊತ್ತಾಗುವಂತಿತ್ತು!

ಪೊಲೀಸ್ ಅಧಿಕಾರಿ ಅವನನ್ನು ದುರುಗುಟ್ಟಿ ನೋಡಿದ. ಅಂಗಡಿಯ ಗಾಜಿಗೆ ಕಲ್ಲು ಹೊಡೆದವನು ಪೊಲೀಸರು ಬಂದು ತನ್ನನ್ನು ಹಿಡಿಯಲಿ ಎಂದು ಅಲ್ಲೇ ಕಾದು ಕುಳಿತಿರುತ್ತಾನಾ? ಅಷ್ಟರಲ್ಲಿ ಪೊಲೀಸ್ ಕಾರಿನ ಬಳಿ ಯಾರೋ ಒಬ್ಬ ಅವಸರದಿಂದ ಹೆಜ್ಜೆ ಹಾಕುತ್ತಿದ್ದವನನ್ನು ಗಮನಿಸಿದ ಪೊಲೀಸ್ ಅತ್ತ ಕಡೆಗೆ ಹೆಜ್ಜೆ ಹಾಕತೊಡಗಿದ. ಸೋಫಿಗೆ ತನ್ನ ಎರಡನೇ ಪ್ರಯತ್ನವೂ ಕೈಕೊಡುತ್ತಿವುದನ್ನು ನೋಡಿ ನಿರಾಶೆಯಾಗತೊಡಗಿತು. ಆದರೂ ಅವನು ಧೈರ್ಯಗುಂದಲಿಲ್ಲ. ಸೋಲನ್ನೊಪ್ಪಿಕೊಳ್ಳಲು ಅವನು ತಯಾರಿರಲಿಲ್ಲ.

ಅದೇ ರಸ್ತೆಯಲ್ಲಿ ಮುಂದಕ್ಕೆ ನಡೆದರೆ ಮತ್ತೊಂದು ಹೋಟೆಲ್ ಇತ್ತು. ಕೈಯಲ್ಲಿ ಹೆಚ್ಚು ಕಾಸಿಲ್ಲದೆ ಹೊಟ್ಟೆ ತುಂಬಾ ಉಣ್ಣಬೇಕೆಂದವರಿಗೆ ಅದು ಕೈ ಕಂಬದಂತೆ ತನ್ನ ಬಳಿಗೆ ಕರೆಯುತ್ತಿತ್ತು. ಅಲ್ಲಿ ಸೋಫಿಯನ್ನು ಹೊರದಬ್ಬುವವರು ಯಾರೂ ಇರಲಿಲ್ಲ. ಅವನ ಶರ್ಟಿನ ಮೇಲಾಗಲೀ ಶೂಗಳ ಮೇಲಾಗಲೀ ಯಾರ ದೃಷ್ಟಿಯೂ ಹೊರಳಲಿಲ್ಲ. ಸೋಫಿ ಅಲ್ಲಿ ಹೊಟ್ಟೆ ತುಂಬಾ ಉಂಡ. ಕೊನೆಯಲ್ಲಿ ವೇಯ್ಟರ್ ಅವನಿಗೆ ಬಿಲ್ಲನ್ನು ಕೊಟ್ಟಾಗ, ಸೋಫಿ, "ಇದಕ್ಕೂ ನನಗೂ ಯಾವುದೇ ಸಂಬಂಧವಿಲ್ಲ! ನೀನು ಬೇಕಾದರೆ ಪೊಲೀಸರನ್ನು ಕರೆಸು." ಎಂದ.

ಹೋಟೆಲಿನ ಯಜಮಾನ ಗಹಗಹಿಸಿ ನಕ್ಕ.

"ನಿನಗೆ ಪೊಲೀಸರ ಸಹವಾಸ ಯಾಕಪ್ಪಾ?" ಎಂದು, "ಖಾನ್?" ಎಂದ.

ಒಬ್ಬ ಆಜಾನುಬಾಹು ವ್ಯಕ್ತಿ ಬಂದು ಸೋಫಿಯನ್ನು ಅನಾಮತ್ತಾಗಿ ಎತ್ತಿ ರಸ್ತೆಗೆ ಒಗೆದ. ಸೋಫಿ ಏನೂ ಆಗಿಲ್ಲವೆಂಬಂತೆ ಎದ್ದು ಎರಡನೆಯ ಬಾರಿ ಮೈ ಕೊಡವಿಕೊಳ್ಳತೊಡಗಿದ.

ಅಲ್ಲೇ ಗಸ್ತು ತಿರುಗುತ್ತಿದ್ದ ಪೊಲೀಸನೊಬ್ಬ ಸೋಫಿಯನ್ನು ನೋಡಿ ಇವೆಲ್ಲಾ ಮಾಮೂಲು ಎಂಬಂತೆ ವ್ಯಂಗ್ಯ ನಗೆ ಬೀರುತ್ತಾ ಮುಂದಕ್ಕೆ ನಡೆದ. ಸೋಫಿಗೆ ಮತ್ತೆ ಮ್ಯಾಡಿಸನ್ ಚೌಕದ ಬೆಂಚೇ ಗತಿ ಎಂಬುದು ಖಾತ್ರಿಯಾಗತೊಡಗಿತು. ಅವನು ಚಿಂತಾಕ್ರಾಂತನಾಗಿ ಯೋಚಿಸತೊಡಗಿದ. ಏನೂ ತೋಚಲಿಲ್ಲ. ಅವನ ಎದುರಿಗೆ ಕೊಂಚ ದೂರದಲ್ಲಿ ದೊಡ್ಡದೊಂದು ಅಂಗಡಿ ಕಾಣಿಸಿತು. ಅಂಗಡಿಯ ಹೊರಗೆ ಒಬ್ಬ ಹರೆಯದ ಹುಡುಗಿ ಶೋಕೇಸಿನಲ್ಲಿ ಜೋಡಿಸಿಟ್ಟಿದ್ದ ವಸ್ತುಗಳನ್ನು ಆಸೆ ಕಂಗಳಿಂದ ನೋಡುತ್ತಾ ಜೊಲ್ಲು ಸುರಿಸಿಕೊಂಡು ನಿಂತಿದ್ದಳು. ಅವಳ ಸನಿಹದಲ್ಲೇ ಒಬ್ಬ ದಷ್ಟಪುಷ್ಟ ಪೊಲೀಸ್ ನಿಂತುಕೊಂಡಿದ್ದ. ಸೋಫಿಯ ತಲೆಗೆ ಒಂದು ವಿಚಿತ್ರ ಆಲೋಚನೆ ಹೊಳೆಯಿತು. ಅವನು ಅಲ್ಲಿಂದ ವೇಗವಾಗಿ ಹುಡುಗಿಯ ಕಡೆಗೆ ಹೆಜ್ಜೆ ಹಾಕಿದ. ಕುತ್ತಿಗೆಗೆ ಕಟ್ಟಿದ್ದ ಟೈಯನ್ನು ಸರಿಪಡಿಸುತ್ತಾ, ಹುಡುಗಿಗೆ ಕಣ್ಣು ಮಿಟುಕಿಸುತ್ತಾ ಅಸಹ್ಯಕರವಾಗಿ ಏನೆಲ್ಲಾ ಮಂಗಚೇಷ್ಟೆ ಮಾಡಲುಪಕ್ರಮಿಸಿದ. ಅವಳು ಅಸಹ್ಯಗೊಂಡು ಮುಖ ತಿರುಗಿಸಿದಾಗ ಅವಳ ಸುತ್ತ ತಿರುಗಲಾರಂಭಿಸಿದ. ಪಾಪ ಹುಡುಗಿ ಮುಖ ಸಿಂಡರಿಸಿಕೊಂಡು ಮುಂದೆ ಹೋದಳು.

ಸೋಫಿ ಅವಳನ್ನೇ ಹಿಂಬಾಲಿಸಿದ. ಅವಳು ಖಂಡಿತವಾಗಿಯೂ ಈಗ ಪೊಲೀಸನಿಗೆ ದೂರು ಕೊಡುತ್ತಾಳೆಂದು ಅವನು ಬಗೆದಿದ್ದ.

ಪೊಲೀಸ್ ಅವನ ಕಡೆಗೆ ಕಣ್ಣೆತ್ತಿಯೂ ನೋಡಲಿಲ್ಲ. ಅವನು ನಗೆಯಾಡುತ್ತಾ ಮುಂದಕ್ಕೆ ಹೋದ.

ಪೊಲೀಸ್ ಅತ್ತ ಹೋಗುತ್ತಿದ್ದಂತೆಯೇ ಹುಡುಗಿ ಇವನೆಡೆಗೆ ನಡೆದು ಬಂದಳು. ಅವನ ಕೈಯನ್ನು ಗಟ್ಟಿಯಾಗಿ ಹಿಡಿದು, "ಆ ದರಿದ್ರ ಪೊಲೀಸ್ ಇಲ್ಲಿಂದ ತೊಲಗಲಿ ಅಂತಲೇ ಕಾಯುತ್ತಿದ್ದೆ. ಹತ್ತಿರದಲ್ಲೇ ನನ್ನ ರೂಮಿದೆ ಡಿಯರ್. ಹೋಗೋಣ ಬಾ ಡಿಯರ್." ಎಂದಳು ಇನ್ನೊಂದು ಕೈಯಿಂದ ಅವನ ಕೆನ್ನೆಯನ್ನು ಸವರುತ್ತಾ.

ಅವಳೊಬ್ಬ ಬೀದಿ ವೇಶ್ಯೆ ಎಂದು ಗೊತ್ತಾಗುತ್ತಿದ್ದಂತೆಯೇ ಸೋಫಿ ಅವಳಿಂದ ಬಿಡಿಸಿಕೊಂಡು